## ಆ್ಯಂಟಿಬಯೋಟಿಕ್ಸ್‌ನಿಂದ ಕಿಡ್ನಿಗೆ ತೊಂದರೆ

ರೋಗ ನಿಯಂತ್ರಣಕ್ಕೆ ಪ್ರತಿಜೀವಕ (ಆ್ಯಂಟಿಬಯೋಟಿಕ್ಸ್) ಬಳಸುತ್ತೇವೆ. ಅದರಿಂದ ರೋಗವನ್ನೂ ನಿಯಂತ್ರಿಸುತ್ತೇವೆ ಕೂಡ. ಆದರೆ ಅವು ಮೂತ್ರಪಿಂಡಗಳ ಮೇಲೆ ಹಾಕುವ ಒತ್ತಡ ಮಾರಣಾಂತಿಕ ತೊಂದರೆಗೂ ಕಾರಣವಾಗಬಹುದು ಎಂದು ನ್ಯೂಯಾರ್ಕ್‌ನ ಸಂಶೋಧಕರ ಅಧ್ಯಯನ ಹೇಳಿದೆ.

ಪ್ರತಿಜೀವದ ಅಡ್ಡಪರಿಣಾಮ ಅರಿವಿಗೆ ಬರುವುದೇ ಇಲ್ಲ. ಇದ್ದಕ್ಕಿದ್ದಂತೆ ಮೂತ್ರನಾಳಗಳಲ್ಲಿ ನಂಜು ಉಂಟಾಗುತ್ತದೆ. ಅದು ಮೂತ್ರಪಿಂಡವನ್ನು ಸಂಪೂರ್ಣ ಹಾಳುಗೆಡವುತ್ತದೆ. ಅದರ ಕಾರ್ಯಕ್ಷಮತೆಯೂ ಕ್ಷೀಣಿಸುತ್ತದೆ. ಇದರ ಆರಂಭಿಕ ಲಕ್ಷಣವನ್ನು ಸಾಮಾನ್ಯವಾಗಿ ಗುರುತಿಸುವುದು ಕಷ್ಟ. ಎಡೆಬಿಡದೆ ಜ್ವರ, ಬೆನ್ನು ನೋವು, ವಾಂತಿಯಾಗುತ್ತದೆ. ಕ್ರಮೇಣ ಮೂತ್ರನಾಳ ಕೊಳೆಯುತ್ತಾ (sepsis) ಹೋಗುತ್ತದೆ. ಆಮೇಲೆ ಸಾವು ಸಂಭವಿಸುವ ಅಪಾಯವೇ ಹೆಚ್ಚು ಎಂದು ಸಂಶೋಧಕರು ಅಭಿಪ್ರಾಯಪಟ್ಟಿದ್ದಾರೆ.

## ಜ್ವರಕ್ಕೆ ಲಸಿಕೆ

ಇತ್ತೀಚೆಗೆ ಜ್ವರವೇ ಜೀವಪೀಡಕವಾಗಿ ಜಗತ್ತನ್ನು ನಲುಗಿಸುತ್ತಿದೆ. ಇಂತಹ ಸಮಸ್ಯೆಯನ್ನು ಸವಾಲಾಗಿ ಇಟ್ಟುಕೊಂಡ ಲಂಡನ್ ಸಂಶೋಧಕರು ಎಲ್ಲಾ ಬಗೆಯ ಜ್ವರಗಳನ್ನು ನಿಯಂತ್ರಿಸಲು ಲಸಿಕೆಯನ್ನು ಕಂಡು ಹಿಡಿದಿದ್ದಾರೆ.

ಲಸಿಕೆಯನ್ನು ಅಂತರರಾಷ್ಟ್ರೀಯ ಸಂಶೋಧಕರ ತಂಡ ಕಂಡುಹಿಡಿದಿದ್ದು, ಎಲ್ಲಾ ಬಗೆಯ ಜ್ವರಗಳ ನಿಯಂತ್ರಣಕ್ಕೆ ಏಕ ಮಾದರಿಯ ಲಸಿಕೆ ವರದಾನವಾಗಲಿದೆ ಎಂದು ಅಧ್ಯಯನ ನಡೆಸಿದ ತಂಡ ಅಭಿಪ್ರಾಯಪಟ್ಟಿದೆ.

ಜ್ವರಕ್ಕೆ ಕಾರಣವಾಗುವ ಕೆಲವು ವೈರಸ್‌ಗಳನ್ನು ನಿಯಂತ್ರಿಸುವ ಮತ್ತು ರೋಗ ನಿರೋಧಕ ಶಕ್ತಿಯನ್ನು ವೃದ್ಧಿಸುವ ಲಸಿಕೆಗಳು ಇವೆ. ತಮ್ಮ ತಂಡ ತಯಾರಿಸಿದ ಲಸಿಕೆಯು ಒಂದು ವರ್ಷದ ಅವಧಿಯದ್ದಾಗಿದೆ. ಇದನ್ನು ಮುಂದಿನ ಒಂದು ವರ್ಷದ ಅವಧಿಯ ಹವಾಮಾನ ಮತ್ತು ರೋಗ ಲಕ್ಷಣಗಳ ಸಾಧ್ಯತೆಯನ್ನು ಅಧ್ಯಯನ ನಡೆಸಿ ಕಾಲದಿಂದ ಕಾಲಕ್ಕೆ ಪರಿಷ್ಕರಿಸಿ ನೀಡುವುದಾಗಿ ಸಂಶೋಧಕರು ಹೇಳಿಕೊಂಡಿದ್ದಾರೆ.

---

## ಸಮುದ್ರ ಮಥನ




### ಮಾಹಿತಿಪೂರ್ಣ ಬರಹ

'ಚಾಮುಂಡಿ ಬೆಟ್ಟ ಪ್ರವಾಸಿ ತಾಣವೆ?' ಕೆ.ಜೆ. ಮರಿಯಪ್ಪ ಅವರ ಮುಖಪುಟ ಲೇಖನ (ಸುಧಾ, ಅ.6) ಮಾಹಿತಿಪೂರ್ಣವಾಗಿದೆ. ಇರ್ಷಾದ್ ಅವರ ಚಿತ್ರಗಳು ಆಕರ್ಷಕವಾಗಿವೆ. ಅರಮನೆ ನಗರಿ ಮೈಸೂರಿಗೆ ಕಲಶಪ್ರಾಯವಾಗಿರುವ ಚಾಮುಂಡಿ ಬೆಟ್ಟಕ್ಕೆ ಆಧುನಿಕತೆಯ ಬಿಸಿ ಬೇಡ. ಈಗಿನ ಮೈಸೂರು ಸ್ವಚ್ಛನಗರ ಎಂಬ ಹೆಗ್ಗಳಿಕೆಯನ್ನೂ ಗಳಿಸಿದ್ದು, ನಿವೃತ್ತರಿಗೆ ಪ್ರಶಸ್ತವಾದ ಸ್ಥಳ ಎಂಬ ಹೆಸರನ್ನೂ ಉಳಿಸಿಕೊಂಡಿದೆ. ಅಭಿವೃದ್ಧಿ ನೆಪದಲ್ಲಿ ಮಾಲಿನ್ಯ, ಜನದಟ್ಟಣೆ, ಸಂಚಾರದಟ್ಟಣೆ ಬೇಡವೇ ಬೇಡ.

—ಮಧುರಾ ಸುಬ್ರಹ್ಮಣ್ಯ ಬೆಂಗಳೂರು, ಗಾಣಧಾಳು ರಾಮಣ್ಣ ಚಿತ್ರದುರ್ಗ, ಡಾ.ಕೆ.ಕೆ. ಜಯಚಂದ್ರಗುಪ್ತ ಹಾಸನ, ಎಚ್.ಆನಂದಕುಮಾರ್ ಚಿತ್ರದುರ್ಗ, ಎಂ.ಎಸ್. ಧರ್ಮೇಂದ್ರ ದೊಡ್ಡಮಗ್ಗೆ, ಸು.ವಿಜಯಲಕ್ಷ್ಮಿ ಶಿವಮೊಗ್ಗ

### 'ಸುಧಾ'ಕ್ಕೆ ಹ್ಯಾಟ್ಸಾಫ್!

ಚಾಮುಂಡಿ ಬೆಟ್ಟ ಬರಹ ಬಹಳ ಚೆನ್ನಾಗಿದೆ. ಮುಖಪುಟ ಚಿತ್ರ ಅದ್ಭುತ. ಈಗೀಗ 'ಸುಧಾ' ಮುಖಪುಟ, ಒಳಪುಟಗಳ ಲೇಖನಗಳು ಬಹಳ ಚೆನ್ನಾಗಿ ಬರುತ್ತಿವೆ. ಪ್ರಕೃತಿ ವಿಭಾಗದಲ್ಲಿ ಬಂದ 'ಅಬ್ಬಾಲ ಜಲಧಾರೆ' (ಪುತ್ತರಿರ ಕರುಣ ಕಾಳಯ್ಯ), ಪ್ರವಾಸ ಲೇಖನ, ಆರೋಗ್ಯ ಲೇಖನ, ಸಿನಿಮಾ ಬರಹ ಎಲ್ಲವೂ ಚೆನ್ನಾಗಿವೆ. 'ಸುಧಾ'ಕ್ಕೆ ನನ್ನ ಹ್ಯಾಟ್ಸಾಫ್..!

—ಕೆ. ಹರೀಶ್ ಕುಮಾರ್ ಪುತ್ತೂರು

### ಚಿಂತನ–ಮಂಥನ

ವಿಚಾರಲಹರಿಯಲ್ಲಿ 'ಭಗವದ್ದಾಸ್ಯ ಎಂಬ ಭಕ್ತಿ' (ತೋಷ) ಬರಹ ವಿಶ್ಲೇಷಣಾತ್ಮಕವಾಗಿದ್ದು ಚಿಂತನ–ಮಂಥನಕ್ಕೆ ದಾರಿ ಮಾಡಿಕೊಟ್ಟಿದೆ. ಇದು ಇಂದಿನ ಸಮಾಜಕ್ಕೆ ಹಿಡಿದ ಕನ್ನಡಿ ಎನ್ನಬಹುದು.

—ಸುಂದರ್ ಬೆಂಗಳೂರು, ಮಹಾವೀರ ಕಾಸರ ಶಿವಮೊಗ್ಗ

### ಸಂವೇದನಾಶೀಲ ತೀರ್ಪುಗಳು

'ನಿಮ್ಮೊಡನೆ'ಯಲ್ಲಿ 'ಎರಡು ಗಮನಾರ್ಹ ತೀರ್ಪುಗಳು' (ಬಿ.ಎಂ. ಹನೀಫ್) ಜ್ಞಾನ ಪ್ರಸಾರ ಹಾಗೂ ಸಂಗೀತ ಸಂಸ್ಕೃತಿಗಳು ಬದುಕಿನ ಅವಿಭಾಜ್ಯ ಅಂಗವಾಗಿರುವಾಗ ಈ ಬಗೆಗಿನ ಕಾಯ್ದೆಗಳ ಅಸ್ತಿತ್ವವಿಲ್ಲದೆ ಸಮರ್ಥವಾಗಿ ವಾದ ಮಾಡುವುದು ಅಸಾಧ್ಯ. ವಾದ ವಿವಾದಗಳನ್ನು ಆಲಿಸಿ ಸಂವೇದನಾಶೀಲ ತೀರ್ಪು ನೀಡುವುದೇ ನ್ಯಾಯಾಧೀಶರ ಕರ್ತವ್ಯ ಎಂಬುದು ಮುಖ್ಯ.

—ರಾಜಶೇಖರ ಹಾದಿಮನಿ ಧಾರವಾಡ

### ಕಥೆ ಚೆನ್ನಾಗಿದೆ

'ಮದುಮಗ' ಅನುವಾದಿತ ಕಥೆ (ಗುರುಮೂರ್ತಿ ಪೆಂಡಕೂರು) ಬದಲಾವಣೆಯ ಈ ಯುಗಕ್ಕೆ ಸೂಕ್ತವಾಗಿದೆ.

—ಕೊಹಿಮ ಬಸರಕೋಡು, ಎಸ್.ವಿಜಯಕುಮಾರಿ ಬೆಂಗಳೂರು

### ಸ್ಯಾಂಚುರಿ ಆಫ್ ಟ್ರುಥ್

ಪ್ರವಾಸ ಲೇಖನ 'ಸ್ಯಾಂಚುರಿ ಆಫ್ ಟ್ರುಥ್' (ಆರ್.ವಿಶ್ವನಾಥ್) ಕಲಾವೈಭವದ ದರ್ಶನ ಮಾಡಿದ್ದು ರೋಮಾಂಚನವಾಯಿತು..

—ಕೋಟೇಶ್ವರ ಸೂರ್ಯನಾರಾಯಣರಾವ್ ಬೆಂಗಳೂರು

### ಹೊಟ್ಟೆಪಾಡು

'ಕೇದಾರದ ಕಾಯಕಜೀವಿಗಳು' (ಅಮರಜಾ ಹೆಗಡೆ) ಸಚಿತ್ರ ಲೇಖನ ಚೆನ್ನಾಗಿದೆ. ಇಲ್ಲಿ ಕೆಲಸ ಮಾಡುವ ಶ್ರಮಜೀವಿಗಳ ಪರಿಶ್ರಮಕ್ಕೆ ಸಾಟಿಯೇ ಇಲ್ಲ. ಇದು ಅವರಿಗೆ ಹೊಟ್ಟೆಪಾಡು. ಉತ್ತಮ ಲೇಖನ.

—ನಾರಾಯಣಯಾಜಿ ಶಿರಾಲಿ, ಬಿ.ಎಸ್. ಸೊಲ್ಲಾಪುರೆ ಕಮಲನಗರ

### ಮರೆಯಲಾಗದ ನಕ್ಷತ್ರ

'ಹಾಡು ಮುಗಿಯಿತು' (ದಿಲಾವರ್ ರಾಮದುರ್ಗ) ಗೋಪಾಲ ವಾಜಪೇಯಿ ಅವರ ಬಗೆಗಿನ ಬರಹ ಚೆನ್ನಾಗಿದೆ. 'ಗೋವಾ' ಅವರು ಸ್ನೇಹಜೀವಿಯಾಗಿದ್ದರು. 1980ರ ದಶಕದಲ್ಲಿ ಧಾರವಾಡದಲ್ಲಿ ಆಕಾಶವಾಣಿ ನಾಟಕಗಳಲ್ಲಿ ಅವರೊಂದಿಗೆ ಅಭಿನಯಿಸುವ ಅವಕಾಶ ನನಗೆ ಸಿಕ್ಕಿತ್ತು. ಅವರ ದೈನ್ಯಾಭಿನಯ ಮರೆಯಲಾಗದ್ದು. ರಂಗಭೂಮಿ ಮಟ್ಟಿಗೆ ಇವರು 'ಮರೆಯಲಾಗದ ನಕ್ಷತ್ರ'.

—ಬಳ್ಳಾರಿ ಮಧ್ವರಾಜ್ ಬೆಂಗಳೂರು

### ಸಂಪೂರ್ಣ ಪರಿಚಯ

ಎಂಬತ್ತರ ದಶಕದಲ್ಲಿ ಬೆಂಗಳೂರಿನ ಚಿತ್ರಕಲಾ ಪರಿಷತ್ತಿನಲ್ಲಿ ನಡೆಯುತ್ತಿದ್ದ ಎಲ್ಲ ನಾಟಕಗಳಿಗೂ ಹಾಜರಾಗುತ್ತಿದ್ದೆ. ಬಿ.ಜಯಶ್ರೀ, ಶಂಕರನಾಗ್ ಅವರ ಅಭಿನಯದ ಜತೆಗೆ ಗೋಪಾಲ ವಾಜಪೇಯಿ ಅವರ ಅಭಿನಯವೂ ಸಾಕಷ್ಟು ನೋಡಿದ್ದೆ. ಗೋವಾ ಅವರ ಸಂಪೂರ್ಣ ಪರಿಚಯದ ಮಾಹಿತಿ ಲೇಖನದಿಂದ ದೊರೆಯಿತು.

—ಲಲಿತಾ ಅಂಬಾಗಿಲು, ಉಪ್ಪುಂದ

### ಆರೋಗ್ಯ ಬರಹ

ಆರೋಗ್ಯ ಅಂಕಣದಲ್ಲಿ 'ಎಂಡೊಮೆಟ್ರಿಯೋಸಿಸ್ ಸಂಕಟ' (ಉಮಾ ಅನಂತ್) ಬರಹದಲ್ಲಿ ಹೆಣ್ಣು ಮಕ್ಕಳು ಋತುಚಕ್ರ ಸಮಯದಲ್ಲಿ ಅನುಭವಿಸುವ ಬೇನೆ, ಯಾತನೆಗೆ ಕಾರಣಗಳು ಹಾಗೂ ಪರಿಹಾರಗಳನ್ನು ವಿವರಿಸಲಾಗಿದೆ. ಉಪಯುಕ್ತ ಬರಹ.

—ಮಧುರಾ ಎಸ್. ಬೆಂಗಳೂರು

### 'ನೋ' ಜಾನಕಿ

'ಸೆಲೆಬ್ರಿಟಿ' ಅಂಕಣದಲ್ಲಿ (ಹನಿ) ಎಸ್.ಜಾನಕಿ ಬಗ್ಗೆ ನೀಡಿದ ಮಾಹಿತಿ ಓದಿ ಹೆಮ್ಮೆ ಎನಿಸಿತು. ಗಾಯಕಿಯಾಗಿ ಜಾನಕಿ ನೀಡಿದ ಕೊಡುಗೆ ಅವಿಸ್ಮರಣೀಯ. ಲೇಖಕರು ಹೇಳಿದಂತೆ ಇನ್ನು ಐದು ತಲೆಮಾರುಗಳು ಕಳೆದರೂ ಜಾನಕಿ ಅವರ ಹಾಡುಗಳಿಗೆ ಯಾವ ಕಿವಿಯೂ 'ನೋ' ಎನ್ನುವ ಸಾಧ್ಯತೆ ಇಲ್ಲವೇ ಇಲ್ಲ.

—ರವೀಂದ್ರನಾಥ ಶಿ.ಯಡಹಳ್ಳಿ